## ಕರ್ನಾಟಕ ವಿಧಾನ ಪರಿಷತ್ತು

1. **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** : **908**
2. **ಮಾನ್ಯ ಸದಸ್ಯರ ಹೆಸರು** : **ಶ್ರೀ ಪ್ರಕಾಶ್ ಕೆ.ರಾಥೋಡ್ (ನಾಮನಿರ್ದೇಶನ ಹೊಂದಿದವರು)**
3. **ಉತ್ತರಿಸಬೇಕಾದ ದಿನಾಂಕ** : **27.12.2022**
4. **ಉತ್ತರಿಸುವ ಸಚಿವರು** : **ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಹೇಮಾವತಿ ಸಹಕಾರಿ ಸಕ್ಕರೆ ಕಾರ್ಖಾನೆ, ಶ್ರೀನಿವಾಸಪುರ, ಚನ್ನರಾಯಪಟ್ಟಣ ತಾಲ್ಲೂಕು ಇದನ್ನು ಆಧುನೀಕರಿಸಿ ಕಬ್ಬು ಅರೆಯುವ ಸಾಮರ್ಥ್ಯವನ್ನು ಹೆಚ್ಚಿಸಲು ಶ್ರೀ ಚಾಮುಂಡೇಶ್ವರಿ ಶುಗರ್ ಲಿಮಿಟೆಡ್, ಬೆಂಗಳೂರು, ಇವರೊಂದಿಗೆ ಒಪ್ಪಂದವಾಗಿದ್ದು, ಈ ಒಪ್ಪಂದದಂತೆ ಹೇಮಾವತಿ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಆಧುನೀಕರಿಸಲಾಗಿದೆ ಯೇ;ಹಾಗಿದ್ದಲ್ಲಿ, ಯಾವ ವರ್ಷದಲ್ಲಿ ಆಧುನೀಕರಿಸಲಾಗಿದೆ ಮತ್ತು | ಹೇಮಾವತಿ ಸಹಕಾರಿ ಸಕ್ಕರೆ ಕಾರ್ಖಾನೆ, ಶ್ರೀನಿವಾಸಪುರ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ – ಈ ಸಕ್ಕರೆ ಕಾರ್ಖಾನೆಯನ್ನು ಸರ್ಕಾರದ ಆದೇಶ ಸಂಖ್ಯೆ: ಸಇ/59/ಸಸಕಾ/2007, ದಿನಾಂಕ:04.01.2007ರನ್ವಯ ಮೆ. ಚಾಮುಂಡೇಶ್ವರಿ ಶುಗರ್ಸ್ ಲಿ., ಬೆಂಗಳೂರು ಇವರಿಗೆ Lease Rehabilitate Operate and Transfer (ಎಲ್.ಆರ್.ಓ.ಟಿ.) ಆಧಾರದ ಮೇಲೆ 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿರುತ್ತದೆ. ಕಾರ್ಖಾನೆ ಮತ್ತು ಗುತ್ತಿಗೆದಾರರ ಮಧ್ಯೆ ದಿನಾಂಕ:26.07.2007ರಂದು ಗುತ್ತಿಗೆ ಒಪ್ಪಂದ ಏರ್ಪಟ್ಟಿರುತ್ತದೆ.<br><br>ಗುತ್ತಿಗೆ ಒಪ್ಪಂದದನ್ವಯ ಗುತ್ತಿಗೆದಾರರು ಗುತ್ತಿಗೆ ಒಪ್ಪಂದ ಏರ್ಪಟ್ಟ ದಿನಾಂಕದಿಂದ ಐದು ವರ್ಷದ ಒಳಗಾಗಿ ಮೊದಲ ಹಂತದಲ್ಲಿ 1250 ಟಿ.ಸಿ.ಡಿ ಯಿಂದ 2500 ಟಿ.ಸಿ.ಡಿಗೆ ಹೆಚ್ಚಿಸಲು ಹಾಗೂ 16. ಮೆ.ವ್ಯಾಟ್ ಸಹ-ವಿದ್ಯುತ್ ಘಟಕವನ್ನು ಸ್ಥಾಪಿಸಬೇಕಾಗಿರುತ್ತದೆ. ನಂತರದ ನಾಲ್ಕು ವರ್ಷಗಳಲ್ಲಿ ಎರಡನೇ ಹಂತದಲ್ಲಿ 2500 ಟಿ.ಸಿ.ಡಿಯಿಂದ 3500 ಟಿ.ಸಿ.ಡಿ.ಗೆ ಹೆಚ್ಚಿಸಲು ಮತ್ತು ಸಹ-ವಿದ್ಯುತ್ ಘಟಕವನ್ನು 21.ಮೆ.ವ್ಯಾಟ್‌ಗೆ ಉನ್ನತೀಕರಿಸಲು ಹಾಗೂ 35 ಕೆ.ಎಲ್.ಪಿ.ಡಿ ಡಿಸ್ಟಿಲರಿ / ಎಥನಾಲ್ ಘಟಕವನ್ನು ಸ್ಥಾಪಿಸಬೇಕಾಗಿರುತ್ತದೆ. |

ಆಧುನೀಕರಿಸಿರುವ ಕಾಮಗಾರಿಗಳಾವುವು;(ವಿವರ ನೀಡುವುದು) ಆಧುನೀಕರಣದ ನಂತರ ಇದರ ಕಬ್ಬು ಅರೆಯುವ ಸಾಮರ್ಥ್ಯ ಎಷ್ಟು ಹೆಚ್ಚಳವಾಗಿದೆ; (ವರ್ಷವಾರು ವಿವರ ನೀಡುವುದು)

ಗುತ್ತಿಗೆದಾರರಾದ ಮೆ. ಚಾಮುಂಡೇಶ್ವರಿ ಶುಗರ್ಸ್ ಲಿ., ಇವರು ಕಾರ್ಖಾನೆಯನ್ನು 2015-16 ರಿಂದ 2020-21ನೇ ಸಾಲುಗಳಲ್ಲಿ ಆಧುನೀಕರಣ ಮತ್ತು ವಿಸ್ತರಣಾ ಕಾರ್ಯಗಳನ್ನು ಕೈಗೊಂಡಿದ್ದು, ಈ ಅವಧಿಯಲ್ಲಿ ಸಕ್ಕರೆ ಘಟಕದ ಸಾಮರ್ಥ್ಯವನ್ನು 1250 ಟಿ.ಸಿ.ಡಿಯಿಂದ 3500 ಟಿ.ಸಿ.ಡಿಯವರೆಗೆ ಹಾಗೂ ಸಹ-ವಿದ್ಯುತ್ ಘಟಕದ ಸಾಮರ್ಥ್ಯವನ್ನು 21.ಮೆ.ವ್ಯಾಟ್‌ಗೆ ಉನ್ನತೀಕರಿಸಿರುತ್ತಾರೆ.

| **ಕ್ರ. ಸಂ** | **ವಿವರ** | **ಮೊತ್ತ (ರೂ. ಕೋಟಿಗಳಲ್ಲಿ)** |
|---|---|---|
| 1. | ಸಕ್ಕರೆ ಘಟಕದ ವಿಸ್ತೀರ್ಣಕ್ಕೆ<br>1. ಭೂಮಿ ಮತ್ತು ಕಟ್ಟಡ<br>2. ಯಂತ್ರೋಪಕರಣಗಳು | <br>9.04<br>197.23 |
| | ಒಟ್ಟು | 206.27 |
| 2. | ಸಹ-ವಿದ್ಯುತ್ ಘಟಕದ ಸ್ಥಾಪನೆಗೆ<br>1. ಭೂಮಿ ಮತ್ತು ಕಟ್ಟಡ<br>2. ಯಂತ್ರೋಪಕರಣಗಳು | <br><br>15.15<br>156.44 |
| | ಒಟ್ಟು | 171.59 |
| | **ನಿವ್ವಳ ಮೊತ್ತ** | **377.86** |

ಕಾರ್ಖಾನೆಯನ್ನು ಆಧುನೀಕರಣಗೊಳಿಸಿದ ನಂತರ ಕಬ್ಬು ಅರೆಯುವ ಸಾಮರ್ಥ್ಯ ಹೆಚ್ಚಳವಾಗಿದ್ದು, ವರ್ಷವಾರು ವಿವರಗಳು ಈ ಕೆಳಕಂಡಂತಿವೆ.

| ವರ್ಷ | ಕಬ್ಬು ಅರೆದಿರುವ ಪ್ರಮಾಣ (ಮೆ.ಟನ್‌ಗಳಲ್ಲಿ) | ಸಕ್ಕರೆ ಉತ್ಪಾದನೆ (ಕ್ವಿಂಟಾಲ್‌ಗಳಲ್ಲಿ) | ಶೇಕಡ ವಾರು ಇಳುವರಿ |
|---|---|---|---|
| 2020-21 | 70,273.12 | 53,220 | 7.57% |
| 2021-22 | 2,75,141.92 | 2,41,450 | 8.77% |
| 2022-23 | 3,60,863.82 | 3,34,801 | 9.28% |

ಕಾರ್ಖಾನೆಯು ಹೇಮಾವತಿ ನದಿಯ ಸಮೀಪದಲ್ಲಿ

| | | |
|---|---|---|
| | | ಇರುವುದರಿಂದ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಈ ಕಾರ್ಖಾನೆಗೆ ಡಿಸ್ಟಿಲರಿ ಘಟಕದ ಸ್ಥಾಪನೆಗೆ ಅನುಮತಿಯನ್ನು ನೀಡದೇ ಇರುವುದರಿಂದ ಹಾಗೂ ಡಿಸ್ಟಿಲರಿ ಘಟಕವನ್ನು ಸ್ಥಾಪಿಸಿದಲ್ಲಿ ಅದರಿಂದ ಉತ್ಪಾದನೆಯಾಗುವ ತ್ಯಾಜ್ಯವು ನದಿ ಮಾಲಿನ್ಯಕ್ಕೆ ಕಾರಣವಾಗುವುದರಿಂದ ಆ ಭಾಗದ ರೈತರ ವಿರೋಧ ಇರುವುದರಿಂದ ಗುತ್ತಿಗೆದಾರರು ಒಪ್ಪಂದದಂತೆ 35 ಕೆ.ಎಲ್.ಪಿ.ಡಿ ಡಿಸ್ಟಿಲರಿ/ಎಥನಾಲ್ ಘಟಕವನ್ನು ಸ್ಥಾಪಿಸಲು ಸಾಧ್ಯವಾಗಿರುವುದಿಲ್ಲ. |
| (ಆ) | ಈ ಒಪ್ಪಂದದ ಪ್ರಕಾರ ಶ್ರೀ ಚಾಮುಂಡೇಶ್ವರಿ ಶುಗರ್ ಲಿಮಿಟೆಡ್, ಬೆಂಗಳೂರು ಇವರು ಸರ್ಕಾರಕ್ಕೆ ಪಾವತಿಸಬೇಕಾದ ಲೀಸ್ ಮೊತ್ತವೆಷ್ಟು; ಈ ಲೀಸ್ ಮೊತ್ತವನ್ನು ಪಾವತಿಸದೇ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿ ನಷ್ಟ ಉಂಟು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಶ್ರೀ ಚಾಮುಂಡೇಶ್ವರಿ ಶುಗರ್ ಲಿಮಿಟೆಡ್; ಬೆಂಗಳೂರು ಇವರ ವಿರುದ್ಧ ಕೈಗೊಂಡಿರುವ ಕ್ರಮಗಳೇನು;(ಸಂಪೂರ್ಣ ವಿವರ ನೀಡುವುದು) | ಗುತ್ತಿಗೆದಾರರಾದ ಮೆ.ಚಾಮುಂಡೇಶ್ವರಿ ಶುಗರ್ಸ್ ಲಿ., ಇವರು 30 ವರ್ಷಗಳ ಅವಧಿಗೆ ರೂ.106.66 ಕೋಟಿಗಳ ಗುತ್ತಿಗೆ ಮೊತ್ತವನ್ನು ಹೇಮಾವತಿ ಸಹಕಾರಿ ಸಕ್ಕರೆ ಕಾರ್ಖಾನೆ, ಶ್ರೀನಿವಾಸಪುರ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ - ಈ ಕಾರ್ಖಾನೆಯ ಆಡಳಿತ ಮಂಡಳಿಗೆ ಪಾವತಿಸಬೇಕಾಗಿರುತ್ತದೆ. ಗುತ್ತಿಗೆ ಒಪ್ಪಂದ ಏರ್ಪಟ್ಟ 2007-08ನೇ ಸಾಲಿನಿಂದ 2022-23ನೇ ಸಾಲುಗಳವರೆಗೆ ಗುತ್ತಿಗೆದಾರರು ರೂ.62.00 ಕೋಟಿಗಳನ್ನು ಪಾವತಿಸಬೇಕಾಗಿರುತ್ತದೆ. ಈ ಮೊತ್ತದಲ್ಲಿ ರೂ.42.40 ಕೋಟಿಗಳನ್ನು ಪಾವತಿಸಿದ್ದು, ರೂ.19.61 ಕೋಟಿಗಳನ್ನು ಪಾವತಿಸುವುದು ಬಾಕಿ ಇರುತ್ತದೆ.<br>ಶ್ರೀ ಚಾಮುಂಡೇಶ್ವರಿ ಶುಗರ್ ಲಿಮಿಟೆಡ್, ಬೆಂಗಳೂರು ಇವರು ಗುತ್ತಿಗೆ ಒಪ್ಪಂದದ ಪ್ರಕಾರ ಹೇಮಾವತಿ ಸಹಕಾರಿ ಸಕ್ಕರೆ ಕಾರ್ಖಾನೆ, ಶ್ರೀನಿವಾಸಪುರ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ - ಈ ಕಾರ್ಖಾನೆಗೆ ಗುತ್ತಿಗೆ ಮೊತ್ತವನ್ನು ಪಾವತಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಸದರಿ ವಿಳಂಬದ ಕುರಿತು ಪರಿಶೀಲಿಸಿ ಸರ್ಕಾರಕ್ಕೆ ವರದಿಯನ್ನು ನೀಡುವಂತೆ ಸರ್ಕಾರದ ಪತ್ರ ಸಂಖ್ಯೆ:ಸಿಐ 121 ಸಿಓಎಫ್ 2020, ದಿನಾಂಕ: 26.04.2022ರಲ್ಲಿ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರಿಗೆ ತಿಳಿಸಲಾಗಿರುತ್ತದೆ. |

| | | |
|---|---|---|
| | | 2014-15ನೇ ಸಾಲಿನಿಂದ 2022-23ನೇ ಸಾಲುಗಳವರೆಗೆ ಪಾವತಿಸಲು ಬಾಕಿ ಇರುವ ರೂ.19.61 ಕೋಟಿಗಳ ಗುತ್ತಿಗೆ ಮೊತ್ತವನ್ನು ಶೇ.10 ರ ಬಡ್ಡಿ ದರದಂತೆ ಪಾವತಿಸುವಂತೆ ಕಾರ್ಖಾನೆಯ ಆಡಳಿತ ಮಂಡಳಿಯಿಂದ ಗುತ್ತಿಗೆದಾರರಿಗೆ ತಿಳಿಸಲಾಗಿರುತ್ತದೆ. |
| (ಇ) | ಸರ್ಕಾರಿ ನಿಯಮಗಳ ರೀತ್ಯಾ ಹೇಮಾವತಿ ಸಹಕಾರಿ ಸಕ್ಕರೆ ಕಾರ್ಖಾನೆ, ಶ್ರೀನಿವಾಸಪುರ, ಚನ್ನರಾಯಪಟ್ಟಣ ತಾಲ್ಲೂಕು ಇದಕ್ಕೆ ಹಲವಾರು ವರ್ಷಗಳಿಂದ ಚುನಾವಣೆಯನ್ನು ನಡೆಸದೆ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಈ ಕಾರ್ಖಾನೆಯ ಆಡಳಿತ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ನಿಯಮ ರೀತ್ಯಾ ಚುನಾವಣೆಯನ್ನು ನಡೆಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? ( ಸಂಪೂರ್ಣ ವಿವರ ನೀಡುವುದು) | ಹೇಮಾವತಿ ಸಹಕಾರ ಸಕ್ಕರೆ ಕಾರ್ಖಾನೆ ನಿ., ಶ್ರೀನಿವಾಸಪುರ, ಚನ್ನರಾಯಪಟ್ಟಣ ತಾಲ್ಲೂಕು ಹಾಸನ ಜಿಲ್ಲೆ ಈ ಕಾರ್ಖಾನೆಗೆ ಹೊಸದಾಗಿ 5735 ಜನ ಷೇರುದಾರರನ್ನು ಕಾನೂನು ಬಾಹಿರವಾಗಿ ನೇಮಕ ಮಾಡಿಕೊಂಡಿರುವ ಕಾರ್ಖಾನೆಯ ಕ್ರಮವನ್ನು ಪ್ರಶ್ನಿಸಿ ಶ್ರೀ ಹೆಚ್.ಎಸ್.ಹೇಮಂತ್ ಲೇಟ್ ಹೆಚ್.ಬಿ. ಸತ್ಯನಾರಾಯಣ ಮತ್ತು ಇತರರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:29457-29461/2016 ಅನ್ನು ದಾಖಲಿಸಿದ್ದರು. ಪ್ರತಿಯಾಗಿ ಕಾರ್ಖಾನೆಯು ಹೊಸದಾಗಿ ಶೇರುದಾರರನ್ನು ನೇಮಕ ಮಾಡಿರುವ ಕ್ರಮವು ಸಮರ್ಪಕವಾಗಿದೆ ಎಂದು ಹಾಗೂ ಮೇಲಿನ ರಿಟ್ ಅರ್ಜಿ ದಾಖಲಿಸಿರುವುದನ್ನು ಪ್ರಶ್ನಿಸಿ ಶ್ರೀ.ಕರಿಗೌಡ ಬಿನ್ ಅರಸೇಗೌಡ ಮತ್ತು ಇತರರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಬೆಂಗಳೂರು ಇಲ್ಲಿ ರಿಟ್ ಅರ್ಜಿ ಸಂಖ್ಯೆ: 44356 - 44373/2016 ಅನ್ನು ದಾಖಲಿಸಿರುತ್ತಾರೆ.<br><br>ಈ ಮೇಲಿನ ಎರಡೂ ರಿಟ್ ಅರ್ಜಿಗಳು ಇತ್ಯರ್ಥಕ್ಕೆ ಬಾಕಿ ಇರುತ್ತವೆ. ಈ ನಡುವೆ ಕಾರ್ಖಾನೆಯ ಆಡಳಿತ ಮಂಡಳಿಯ ಸದಸ್ಯರು ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ರಿಟ್ ಅರ್ಜಿ ಸಂಖ್ಯೆ:13783-13784/2016 ಅನ್ನು ದಾಖಲಿಸಿ ಸಹಕಾರ ಚುನಾವಣಾ ಆಯೋಗವು ಕಾರ್ಖಾನೆಯ ಆಡಳಿತ ಮಂಡಳಿಯ ಅವಧಿ ಮುಕ್ತಾಯಗೊಳ್ಳುವುದರ ಒಳಗಾಗಿ ಅಂದರೆ ದಿನಾಂಕ: 31.03.2016ರ ಒಳಗಾಗಿ ಚುನಾವಣೆ |

| | | |
|---|---|---|
| | | ನಡೆಸದಿದ್ದಲ್ಲಿ ಕಾರ್ಖಾನೆಯ ಮಂಡಳಿಯು ಯಾವುದೇ ತಪ್ಪಿಲ್ಲದಿದ್ದರೂ, ಕಾರ್ಖಾನೆಗೆ ಆಡಳಿತಾಧಿಕಾರಿಗಳನ್ನು ನೇಮಕ ಮಾಡುವ ಸಾಧ್ಯತೆ ಇರುತ್ತದೆ ಎಂದು ಮಾನ್ಯ ನ್ಯಾಯಾಲಯದಲ್ಲಿ ರಿಟ್ ಅರ್ಜಿ ದಾಖಲಿಸಿರುತ್ತಾರೆ.<br><br>ಮಾನ್ಯ ನ್ಯಾಯಾಲಯವು ಸದರಿ ಪ್ರಕರಣದಲ್ಲಿ ವಿಚಾರಣೆ ನಡೆಸಿ ಈ ಕೆಳಕಂಡಂತೆ ಆದೇಶಿಸಿರುತ್ತದೆ.<br>In that, if the Election Authority is disabled from conducting elections for various reasons, the petitioner board of Directors shall not be disturbed during the interregnum before the Election are conducted on the expiry of the term as on 31.03.2016. in that, the state Government shall not appoint any Administrator for there is no fault committed by the petitioners in not conducting the Election and accordingly, no matter when the Election Authority conducts the election, the petitioner Board of Directors shall continue in office till such time.<br>ಪ್ರಸಕ್ತ ಆಡಳಿತ ಮಂಡಳಿಯ ಅವಧಿಯು ದಿನಾಂಕ:31.03.2016ಕ್ಕೆ ಮುಕ್ತಾಯಗೊಂಡಿದ್ದರೂ ಸಹ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಆಡಳಿತ ಮಂಡಳಿಯನ್ನು ಮುಂದುವರೆಸಲಾಗಿದೆ. ಕಾರ್ಖಾನೆಗೆ ಹೊಸದಾಗಿ ಷೇರುದಾರ ಸದಸ್ಯರನ್ನು ನೇಮಕ ಮಾಡಿಕೊಂಡಿರುವ ವಿಷಯವು ನ್ಯಾಯಾಲಯದಲ್ಲಿ ಇತ್ಯರ್ಥಗೊಂಡ ನಂತರವೇ ಕಾರ್ಖಾನೆ ಆಡಳಿತ ಮಂಡಳಿಗೆ ಚುನಾವಣೆ ನಡೆಸಲು ಸಾಧ್ಯವಾಗುತ್ತದೆ. |

ಸಂಖ್ಯೆ: ಸಿಐ 258 ಸಿಓಎಫ್ 2022

(ಶಂಕರ.ಬಿ.ಪಾಟೀಲ ಮುನೇನಕೊಪ್ಪ)
ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು